# SORRY ಅನ್ನುತ್ತೀರಾ?



ಕ್ಷಮೆ ಕೇಳುವುದೇನೋ ಸರಿ; ಆದರೆ ಬೇರೆಯವರು ಅದನ್ನು ಸ್ವೀಕರಿಸದಿದ್ದರೆ? ಆದರಿಂದ ನಾಚಿಕೆ ಯಾಗುತ್ತದೆ, ಅಪಮಾನವನ್ನು ಎದುರಿಸುವುದು ಹೇಗೆ ಎಂಬ ಪ್ರಶ್ನೆ ಮನದಲ್ಲಿ ಸುಳಿದು ಹಿಂಜರಿಯುವವರು ಸಾಕಷ್ಟು ಜನ.

■ **ಡಾ. ಕೆ.ಎಸ್. ಚೈತ್ರಾ**

ನಡೆಯುವಾಗ ಅಕಸ್ಮಾತ್ ಯಾರದ್ದೋ ಕಾಲು ತುಳಿದರೆ ಅಪ್ರಯತ್ನಪೂರ್ವಕವಾಗಿ ಬಾಯಿಂದ ಹೊರಡುವ ಶಬ್ದ sorry. ಅದೇ ಮನೆಯಲ್ಲಿ ಪತಿ/ಪತ್ನಿ, ಆಫೀಸಿನಲ್ಲಿ ಸಹೋದ್ಯೋಗಿ, ಕ್ಲಬ್‌ನಲ್ಲಿ ಗೆಳೆಯ/ತಿಯರೊಂದಿಗೆ ತಪ್ಪು ಸ್ಪಷ್ಟವಾಗಿ ತನ್ನದೇ ಎಂದು ತಿಳಿದಿದ್ದರೂ 'ಸಾರಿ' ಎಂಬ ಶಬ್ದ ಹೇಳಲು ಬಾಯಿ ಕಟ್ಟುವುದೇಕೆ? ತಪ್ಪಾಯ್ತು ಎನ್ನುವ ಕನ್ನಡ ಪದಕ್ಕೆ ಬದಲಾಗಿ ಆಂಗ್ಲ ಭಾಷೆಯ ಈ ಶಬ್ದ ಈಗ ಎಲ್ಲೆಲ್ಲೂ ಬಳಕೆಯಲ್ಲಿದೆ. ಒತ್ತಕ್ಷರ ಇಲ್ಲ, ಎರಡೇ ಅಕ್ಷರ; ಹೀಗಿದ್ದೂ ಇಷ್ಟು ಪುಟ್ಟ ಶಬ್ದ ಹೇಳಲು ಕಷ್ಟವೇನು ಎಂಬ ಪ್ರಶ್ನೆಗೆ, ಅಹಂ ಹೆಚ್ಚು, ಹಠಮಾರಿ ಎಂಬ ಪಟ್ಟ ಕಟ್ಟಿದರೂ ಅದಕ್ಕೆ ಹಲವಾರು ಕಾರಣಗಳಿವೆ.

★ ಪ್ರತಿಯೊಬ್ಬ ವ್ಯಕ್ತಿಗೂ ತಾನು ಸರಿ, ತಾನು ಮಾಡಿದ್ದು ಸೂಕ್ತವಾದದ್ದು ಎಂಬ ಭಾವನೆ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ತಾನು ಮಾಡಿದ್ದು ಸರಿಯಲ್ಲ ಎಂದು ತಿಳಿದರೂ ಕ್ಷಮೆ ಕೇಳಿ ಅಧಿಕಾರ ಕಳೆದುಕೊಳ್ಳುವ ಮತ್ತು ಇತರರ ಕಣ್ಣಲ್ಲಿ ಕೀಳಾಗುವ ಹೆದರಿಕೆ ಕಾಡುತ್ತದೆ.

★ ಸಾರಿ ಎಂದರೆ ಬಲಹೀನತೆಯ ಲಕ್ಷಣ ಎಂಬುದು ಜನರಲ್ಲಿರುವ ಇನ್ನೊಂದು ನಂಬಿಕೆ. ತಪ್ಪು ಎಲ್ಲರಿಂದಲೂ ಆಗುತ್ತದೆ. ಆದರೆ ತಾನು ಮಾಡಿದ ತಪ್ಪನ್ನು ಒಪ್ಪಿ ಸಾರಿ ಕೇಳಿದಲ್ಲಿ ದುರ್ಬಲ ಅಂದುಕೊಂಡು ಗೇಲಿ ಮಾಡುತ್ತಾರೆ ಎನ್ನುವುದು ಅನೇಕರ ಅಭಿಪ್ರಾಯ.

★ ಸೋತವರು, ವಾದ ಮಾಡಿ ಗೆಲ್ಲಲು ಶಕ್ತಿ ಇಲ್ಲದವರು ಮಾತ್ರ ಸಾರಿ ಕೇಳಬೇಕು. ವಾದ, ಜಗಳ ಮಾಡಿ ಗೆಲ್ಲುವ ತಾಕತ್ತಿದ್ದವರು ಹಾಗೆ ಕೇಳಬಾರದು, ಕೇಳುವುದಿಲ್ಲ. ಹಾಗೇ, ತಪ್ಪು ಎಂದು ಒಪ್ಪದೇ ಸುಮ್ಮನಿದ್ದರೆ ಅದಕ್ಕಾಗಿ ಹೊಣೆಯಾಗುವುದಿಲ್ಲ. ಸ್ವಲ್ಪ ದಿನಗಳಲ್ಲಿ ತಾನಾಗಿ ಎಲ್ಲವೂ ಮರೆಯುತ್ತದೆ ಎನ್ನುವುದು ಕೆಲವರ ವಾದ.

★ ತಾನು ಮಾಡಿದ ತಪ್ಪಿಗೆ ಸಾರಿ ಎಂದರೆ ತನ್ನನ್ನು ಕೆಟ್ಟ ವ್ಯಕ್ತಿ ಎಂದು ಭಾವಿಸುತ್ತಾರೆ. ಈವರೆಗೆ ಮಾಡಿದ ಒಳ್ಳೆಯ ಕೆಲಸಗಳೆಲ್ಲವನ್ನೂ ಮರೆತು ತನ್ನನ್ನು ನಿರ್ಲಕ್ಷಿಸುತ್ತಾರೆ ಎಂಬ ಭಯ, ಪ್ರೀತಿಪಾತ್ರರ ತಿರಸ್ಕಾರಕ್ಕೆ ಗುರಿಯಾಗುವ ಅಂಜಿಕೆಯೂ ಇರಬಹುದು.

★ ತನ್ನನ್ನು ನಿಜಕ್ಕೂ ಇಷ್ಟ ಪಡುವವರು ತನ್ನ ತಪ್ಪುಗಳನ್ನು ದೊಡ್ಡದು ಮಾಡದೇ ಸಾರಿಗಾಗಿ ಕಾಯದೇ ಹಾಗೆಯೇ ಕ್ಷಮಿಸಬೇಕು. ಹಾಗೆ ಮಾಡದವರು ನಿಜಕ್ಕೂ ಒಳ್ಳೆಯ ಸಂಗಾತಿ/ಸ್ನೇಹಿತರಲ್ಲ ಎಂಬ ಭಾವನೆ ಇರಬಹುದು. ಅವರೊಂದಿಗೆ ಕ್ಷಮೆ ಕೇಳಿ ಸಾಧಿಸುವುದೇನು ಎಂಬ ಧೋರಣೆ ವ್ಯಕ್ತವಾಗುತ್ತದೆ.

★ ಕ್ಷಮೆ ಕೇಳುವುದೇನೋ ಸರಿ; ಆದರೆ ಬೇರೆಯವರು ಅದನ್ನು ಸ್ವೀಕರಿಸದಿದ್ದರೆ? ಆದರಿಂದ ನಾಚಿಕೆ ಯಾಗುತ್ತದೆ, ಅಪಮಾನವನ್ನು ಎದುರಿಸುವುದು ಹೇಗೆ ಎಂಬ ಪ್ರಶ್ನೆ ಮನದಲ್ಲಿ ಸುಳಿದು ಹಿಂಜರಿಯುವವರು ಸಾಕಷ್ಟು ಜನ.

ವಾಸ್ತವದಲ್ಲಿ ಮಾಡಿದ ತಪ್ಪಿಗೆ ಸರಿಯಾದ ರೀತಿಯಲ್ಲಿ ಕ್ಷಮೆ ಕೇಳುವುದರಿಂದ ಆರೋಗ್ಯಕರ ಸಂಬಂಧಗಳು ಬೆಳೆಯುತ್ತವೆ, ವಿಶ್ವಾಸದ ಬಂಧ